ಕರ್ನಾಟಕ ಸರ್ಕಾರ

ಸಂಖ್ಯೆ: ಜಿತಸಂ.ಬೆಂ.ನ.ತರಬೇತಿ.ವಿವ.30/2014-15

ಪ್ರಾಚಾರ್ಯರವರ ಕಾರ್ಯಾಲಯ
ಜಿಲ್ಲಾ ತರಬೇತಿ ಸಂಸ್ಥೆ, ನಗರ
ಕನಕಪುರ ಮುಖ್ಯ ರಸ್ತೆ, ಬನಶಂಕರಿ,
ಬೆಂಗಳೂರು-70,ದಿ:02/08/2014
ಟೆಲಿಫ್ಯಾಕ್ಸ್:26717346.

41

ಗೆ,

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು - 560 001.

JD (Adm) / JD (CDC)
EST (3)
Gopal K.
Contd. EST
9/7/14

ಮಾನ್ಯರೆ,

ವಿಷಯ:- ವಿವಿಧ ಇಲಾಖೆಗಳ 'ಸಿ' ಗುಂಪಿನ ಸಿಬ್ಬಂದಿಗಳಿಗೆ ರಬೇತಿಯನ್ನು ಹಮ್ಮಿಕೊಂಡಿರುವ ಬಗ್ಗೆ.

---

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಇವರು ಅನುಮೋದಿಸಿದ 2014-15ರ ಸಾಲಿನ ತರಬೇತಿ ಕಾರ್ಯಕ್ರಮದಂತೆ ಈ ಸಂಸ್ಥೆಯಲ್ಲಿ ವಿವಿಧ ಇಲಾಖೆಗಳ 'ಸಿ' ಗುಂಪಿನ ಸಿಬ್ಬಂದಿಗಳಿಗೆ ವಿವಿಧ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ನೌಕರರು ತಮ್ಮ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಣೆ ಮತ್ತು ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳ ಸಿಬ್ಬಂದಿಗಳಿಗೆ ವಿಷಯ ಪರಿಣಿತರ ಮೂಲಕ ತರಬೇತಿಯನ್ನು ನೀಡಲಾಗುತ್ತಿದೆ.

ಅದರಂತೆ, ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್ 'ಸಿ ' ಸಿಬ್ಬಂದಿಗಳಿಗೆ ಈ ಕೆಳಕಂಡಂತೆ ತರಬೇತಿಗಳನ್ನು ಹಮ್ಮಿಕೊಂಡಿದ್ದು, ತರಬೇತಿಯನ್ನು ಈ ಸಂಸ್ಥೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ.

| ಕ್ರ. ಸಂ | ತರಬೇತಿ ವಿಷಯ | ದಿನಾಂಕ |
|---|---|---|
| 1 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ಟೆಂಡರ್ ಮ್ಯಾನೇಜ್‌ಮೆಂಟ್ ತಯಾರಿಕೆ ಬಗ್ಗೆ | 04/08/2014 ರಿಂದ 05/08/2014 |
| 2 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ದಾಖಲೆ ನಿರ್ವಹಣೆ ಬಗ್ಗೆ ತರಬೇತಿ | 11/08/2014 ರಿಂದ 12/08/2014 |
| 3 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ನಿವೃತ್ತಿ ವೇತನ ಬಗ್ಗೆ ತರಬೇತಿ | 11/08/2014 ರಿಂದ 13/08/2014 |
| 4 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ಗಣಕ ಯಂತ್ರದ ಪ್ರಬುದ್ಧ ತರಬೇತಿ | 18/08/2014 ರಿಂದ 22/08/2014 |
| 5 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ಹೆಚ್.ಆರ್.ಎಂ.ಎಸ್ ಬಗ್ಗೆ ತರಬೇತಿ. | 25/08/2014 ರಿಂದ 26/08/2014 |

ತರಬೇತಿಗೆ ನಿಯೋಜಿಸಿದ ಸಿಬ್ಬಂದಿಗಳ ಹೆಸರುಗಳನ್ನು ತರಬೇತಿ ನಡೆಯುವ ಒಂದು ವಾರದ ಮುಂಚಿತವಾಗಿ ಕಳುಹಿಸಲು ಹಾಗೂ ತರಬೇತಿ ನಡೆಯುವ ದಿನಾಂಕದಂದು ಬೆಳಗ್ಗೆ 10 ಗಂಟೆಗೆ ಈ ಸಂಸ್ಥೆಗೆ ಹಾಜರಾಗಿ ತರಬೇತಿಗೆ ವರದಿ ಮಾಡಿಕೊಳ್ಳುವಂತೆ ಆದೇಶ ಹೊರಡಿಸಲು ಕೋರಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಇವರು ತರಬೇತಿ ಸಂಸ್ಥೆಯಿಂದ ನಿಯೋಜನಾ ಕೋರಿಕಾ ಪತ್ರ ಬಂದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ತಪ್ಪದೆ ತರಬೇತಿಗೆ ಸಿಬ್ಬಂದಿಗಳನ್ನು ನಿಯೋಜಿಸಿ ತರಬೇತಿಗೆ ಹಾಜರಾಗುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಹಾಗೂ ತರಬೇತಿಗೆ ಹಾಜರಾಗದವರ ಬಗ್ಗೆ ವರದಿ ನೀಡಲು ಸಹ ಸೂಚಿಸಿರುತ್ತಾರೆ.ಆದಕಾರಣ, ದಯವಿಟ್ಟು ಮೇಲ್ಕಂಡಂತೆ ಸೂಚಿಸಿರುವ ತರಬೇತಿಗಳಿಗೆ ನಿಗಧಿತ ಸಂಖ್ಯೆಯಲ್ಲಿ (ಒಂದು ಕಛೇರಿಯಿಂದ ಇಬ್ಬರು) ನೌಕರರನ್ನು ನಿಯೋಜಿಸಿ, ತರಬೇತಿಗಳನ್ನು ಯಶಸ್ವಿಗೊಳಿಸಲು ಸಹಕರಿಸಬೇಕಾಗಿ ಕೋರಲಾಗಿದೆ.

ತಮ್ಮ ನಂಬುಗೆಯ,

ಪ್ರಾಚಾರ್ಯರು
ಜಿಲ್ಲಾ ತರಬೇತಿ ಸಂಸ್ಥೆ,
ಬೆಂಗಳೂರು ನಗರ

PS-1069
9/7/14

JDPS-131
11/7/14

## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/148/ಇಎಸ್‌ಟಿ(7)2014 11359

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 23/07/2014.

### ಸುತ್ತೋಲೆ

ವಿಷಯ: ಸಿ ಗುಂಪಿನ ಸಿಬ್ಬಂದಿಗಳನ್ನು ತರಬೇತಿಗೆ ನಿಯೋಜಿಸುವ ಬಗ್ಗೆ

--*--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ನಗರ ಇವರ ಪತ್ರ ಸಂ: ಜಿತಸಂ.ಬೆಂನ.ತರಬೇತಿ.ವಿ.ವ/30/2014-15, ದಿನಾಂಕ: 02.07.2014ರ ಪ್ರತಿಯನ್ನು ಈ ಮೂಲಕ ಲಗತ್ತಿಸಿ ಕಳುಹಿಸಿದೆ. ಸದರಿ ಪತ್ರಗಳಲ್ಲಿ ನಮೂದಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ 'ಸಿ' ಗುಂಪಿನ ಸಿಬ್ಬಂದಿಗಳಾದ ಕಛೇರಿ ಅಧೀಕ್ಷಕರು/ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರು/ದ್ವಿತೀಯ ದರ್ಜೆ ಸಹಾಯಕರು/ಬೆರಳಚ್ಚುಗಾರರು ಇವರನ್ನು ನಿಗದಿತ ತರಬೇತಿಗೆ ನಿಯೋಜಿಸಿ ತರಬೇತಿಗೆ ಕಡ್ಡಾಯವಾಗಿ ಹಾಜರಾಗುವ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ಮಾಹಿತಿ ಕಳುಹಿಸಲು ಮತ್ತು ನಿಯೋಜಿತ ಸಿಬ್ಬಂದಿಗಳು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ತಿಳಿಸುವಂತೆ ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರು ಹಾಗೂ ಮುಖ್ಯಗ್ರಂಥಪಾಲಕರಿಗೆ ಈ ಮೂಲಕ ಸೂಚಿಸಲಾಗಿದೆ. ನಿಯೋಜಿಸಲಾದ ಸಿಬ್ಬಂದಿಗಳು ತರಬೇತಿಗೆ ಹಾಜರಾಗಲು ನಿರಾಕರಿಸಿದ/ಹಾಜರಾಗದಿರುವ ಸಿಬ್ಬಂದಿಗಳ ವಿವರಗಳನ್ನು ಸಹ ಕಳುಹಿಸುವುದು. ಅಂತಹ ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ಕರಡು ನಿರ್ದೇಶಕರಿಂದ ಅನುಮೋದಿಸಿದೆ**

M Revanna
ನಿರ್ದೇಶಕರು

ಇವರಿಗೆ:-

1. ಪ್ರಿನ್ಸಿಪಾಲರು ಸರ್ಕಾರಿ ಎಸ್. ಕೆ. ಎಸ್.ಜೆ.ಟಿ. ಸಂಸ್ಥೆ ಬೆಂಗಳೂರು
2. ಪ್ರಿನ್ಸಿಪಾಲರು ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು
3. ಪ್ರಿನ್ಸಿಪಾಲರು ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್, ಬೆಂಗಳೂರು
4. ಪ್ರಿನ್ಸಿಪಾಲರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು
5. ಪ್ರಿನ್ಸಿಪಾಲರು ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ, ಬೆಂಗಳೂರು
6. ಪ್ರಿನ್ಸಿಪಾಲರು ಸರ್ಕಾರಿ ಜಿ. ಆರ್. ಐ.ಸಿ.ಪಿ. ಬೆಂಗಳೂರು
7. ಪ್ರಿನ್ಸಿಪಾಲರು ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ ಬೆಂಗಳೂರು
8. ಪ್ರಿನ್ಸಿಪಾಲರು ಸರ್ಕಾರಿ ಎಸ್. ಆರ್. ಸಿ.ಐ.ಬಿ.ಎಂ. ಬೆಂಗಳೂರು
9. ಪ್ರಿನ್ಸಿಪಾಲರು ಸರ್ಕಾರಿ ಚಲನಚಿತ್ರ ಮತ್ತು ದೂರ ದರ್ಶನ ಸಂಸ್ಥೆ ಬೆಂಗಳೂರು
10. ಪ್ರಿನ್ಸಿಪಾಲರು ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ
11. ಪ್ರಿನ್ಸಿಪಾಲರು ಸರ್ಕಾರಿ ಪಾಲಿಟೆಕ್ನಿಕ್ ಇಮ್ಮಡಿಹಳ್ಳಿ
12. ಮುಖ್ಯಗ್ರಂಥಪಾಲಕರು ಸ್ಟೆರಿಕ್ ಬೆಂಗಳೂರು
13. ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ನಗರ ಇವರಿಗೆ ಮಾಹಿತಿಗಾಗಿ
14. ಇ-ಆಡಳಿತ ಘಟಕಕ್ಕೆ

(P.T.O)

Sh E-7 Circular